ಸಿ.ಸಿ .ನಂ.174/2023                    ಪಿಡಬ್ಲೂಃ 1

ದಿನಾಂಕಃ 22-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಕುಮಾರಿ ಪಿ ಹೆಚ್ ಕೆ ವಕೀಲರಿಂದಃ**

6. ದಿ 15-04-2019 ರ ಮೊದಲು ಆರೋಪಿ ನಮ್ಮ ಸಂಸ್ಥೆಯಿಂದ ಯಾವುದೇ ಸಾಲವನ್ನು ಪಡೆದಿಲ್ಲ . ನಮ್ಮ ಸಂಸ್ಥೆಯಲ್ಲಿ ಸಾಲವನ್ನು ಪಡೆಯಬೇಕಾದರೆ ಕಡ್ಡಾಯವಾಗಿ ಸದಸ್ಯತ್ವವನ್ನು ಹೊಂದಿರಬೇಕು . ಸದಸ್ಯತ್ವ ಹೊಂದಿದ ಮೇಲೆ ಯಾವಾಗಲಾದರೂ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಬಹುದು . ಸದಸ್ಯತ್ವವನ್ನು ಹೊಂದಲು ನಾವು ಅವರ ಆಧಾರ ಕಾರ್ಡ, ಅಡ್ರೆಸ್ ಪ್ರೂಪ್ ಪಡೆದುಕೊಳ್ಳುತ್ತೇವೆ . ಸದಸ್ಯತ್ವ ಪಡೆಯಲು ಆಡಳಿತ ಮಂಡಳಿಯ ತಿಂಗಳ ಮಿಟಂಗ್ ನಲ್ಲಿ ನಿರ್ಧರಿಸಲಾಗುತ್ತದೆ . ನಮ್ಮ ಮುಖ್ಯ ಸಹಕಾರಿಯ ಮುಖ್ಯ ಕಚೇರಿ ಶಿರಸಿಯಲ್ಲಿದೆ. ಮಿಟಿಂಗ್ ಹತ್ತಿರ ಇದ್ದಾಗ ಸಾಲದ ಅರ್ಜಿ ಕೊಟ್ಟಾಗ ಸಾಲ ತಕ್ಷಣ ಮಂಜೂರಾಗುತ್ತದೆ . ಕೆಲವೊಂದು ಸಮಯದಲ್ಲಿ 1 ನೇ ತಾರೀಖಿಗೆ ಸಾಲದ ಅರ್ಜಿ ಬಂದರೆ ಹಾಗೂ ಮಿಟಿಂಗ್ 15 ನೇ ತಾರೀಖಿಗೆ ಇದ್ದರೆ ಸಾಲ 15 ನೇ ತಾರೀಖಿಗೆ ಮಿಟಿಂಗ್ ನಲ್ಲಿ ನಿರ್ಧರಿಸುತ್ತೇವೆ . ಸಾಲದ ಅರ್ಜಿ ಬಂದ ನಂತರ ಅದನ್ನು ವೆರಿಪಾಯ್ ಮಾಡಿ ಮುಖ್ಯ ಕಚೇರಿಗೆ ಕಳುಹಿಸಿ ನಂತರ ಸಾಲ ಮಂಜೂರು ಮಾಡುವ ಪ್ರೊಸಿಜರ್ ಇದೆ . ಸಾಲಗಾರ ಸಾಲವನ್ನು ತುಂಬುವ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡುತ್ತೇವೆ ಎಂದರೆ ಸರಿ . ಸಾಲಗಾರರು ಕೊಟ್ಟಿರುವ ದಾಖಲಾತಿಗಳಲ್ಲಿ ಯಾವುದಾದರೂ ನ್ಯೂನ್ಯತೆ ಕಂಡು ಬಂದರೆ ಅಂತಹ ಸಾಲದ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ ಎಂದರೆ ಸರಿ . ತಿರಸ್ಕತಗೊಂಡ ಅರ್ಜಿಯನ್ನು ಆರೋಪಿಗೆ ಹಿಂದಿರುಗಿಸುವುದಿಲ್ಲ ಅದು ನಮ್ಮ ಸಂಸ್ಥೆಯಲ್ಲಿಯೇ ಇರುತ್ತದೆ ಎಂದರೆ ಸರಿ . ಈ ಪ್ರಕರಣದ ಸಾಲಗಾರ ಏನು ಉದ್ಯೋಗ ಮಾಡುತ್ತಾರೆ, ಆ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಈ ಪ್ರಕರಣದಲ್ಲಿ ಸಾಲವನ್ನು ಮಂಜೂರು ಮಾಡುವಾಗ ಸಾಲಗಾರರಿಂದ ಸಾಲದ ಅರ್ಜಿ , ಕರಾರು ಬಾಂಡ್ ಪಡೆದುಕೊಂಡಿದ್ದೇವೆ . ಸಾಲದ ಅರ್ಜಿ ಬಂದ ದಿನವೇ ಸಾಲದ ಅರ್ಜಿ , ಕರಾರು ಬಾಂಡ್

ಹಾಗೂ ಹೈಪ್ರೋಥಿಕೇಶನ್ ಗೆ ಸಹಿಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ . ಸಾಲ ನೀಡುವ ಸಂದರ್ಭದಲ್ಲಿ ಆರೋಪಿಯಿಂದ ಆರ್ ಟಿ ಸಿ ಪಡೆದುಕೊಂಡಿಲ್ಲ. ನಿಪಿ-7 ರ ಪ್ರಕಾರ ಸಾಲದ ಅರ್ಜಿಯನ್ನು ನೀಡಿದ ದಿನಾಂಕ 16-04-2020 ಎಂದರೆ ಸರಿಯಲ್ಲ. ಸಾಕ್ಷಿ ನಿಪಿ-7 ನ್ನು ನೋಡಿ ದಿಃ 15-04-2020 ಎಂದು ನುಡಿದಿರುತ್ತಾರೆ . ದಿಃ 16-04-2020 ಇದು ನೆಕ್ಸ ವಾಯದೆ ಬರುತ್ತದೆ ಎಂದು ರೆಪರೆನ್ಸ ದಿನಾಂಕ ನಮೂದು ಮಾಡಿರುತ್ತೇವೆ . ಸಾಲವನ್ನು ದಿಃ 16-04-2019 ರಂದು ಮಂಜೂರು ಮಾಡಿರುತ್ತೇವೆ . ಅರ್ಜಿಯನ್ನು ದಿಃ 15-04-2019 ರಂದು ನೀಡಿರುತ್ತಾರೆ . ಆಡಳಿತ ಮಂಡಳಿಯ ಸಭೆ ತಿಂಗಳಿಗೆ ಒಂದು ಸಲ ನಡೆಯುತ್ತದೆ . ಅಧ್ಯಕ್ಷರು ಜಿಎಮ್ ಮೂಲಕ ಯಾವತ್ತು ಆಡಳಿತ ಮಂಡಳಿಯ ಸಭೆಯನ್ನು ಮಾಡಬೇಕೆಂದು ಹೇಳುತ್ತಾರೆ ಆ ದಿನಾಂಕದಂದು ಆಡಳಿತ ಮಂಡಳಿಯ ಸಭೆ ನಡೆಯುತ್ತದೆ . ಆಡಳಿತ ಮಂಡಳಿಯ ಸಭೆಯಲ್ಲಿ ಸಾಲಗಾರರಿಂದ ಯಾವ ಯಾವ ದಾಖಲಾತಿಗಳನ್ನು ಪಡೆಯಬೇಕೆಂದು ಠರಾವು ಆಗುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.